**1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಬೆಂಗಳೂರು ಗ್ರಾಮಂತರ, ಬೆಂಗಳೂರು**

| | |
|---|---|
| ಮಿಸ್ ಸಂಖ್ಯೆ | 36/2023 |
| ಅರ್ಜಿದಾರ | ಪಿ.ಡಬ್ಲ್ಯೂ -1 |
| ದಿನಾಂಕ | 23.02.2026 |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀ ಸವಾಲು : ಎದರುದಾರರ ಪರ ಶ್ರೀ/ಶ್ರೀಮತಿ/ ಕು/ ಜೆ.ಜೆ ನ್ಯಾಯವಾದಿಗಳಿಂದ.**

1 ಮತ್ತು 3 ಅರ್ಜಿದಾರರು ನನ್ನ ಹೆಂಡತಿ ಮತ್ತು ಮಗ ಇರುತ್ತಾರೆ. ನಾನು ವ್ಯವಸಾಯವನ್ನು ಮಾಡುತ್ತೇನೆ. ನನ್ನ ಹೆಂಡತಿ ಮನೆ ಕೆಲಸ ಮಾಡುತ್ತಿದ್ದು ಮಗ ಬೇರೆ ಕಡೆ ಕೆಲಸಕ್ಕೆ ಹೋಗುತ್ತಾರೆ. ಎದರುದಾರರು ನಮಗೆ ಸಂಬಂಧಿಕರು ಇರುವುದಿಲ್ಲ. ಈ ಮೊದಲು ನಮಗು ಮತ್ತು ಎದರುದಾರರಿಗು ಯಾವುದೇ ವ್ಯವಹಾರ ಇರುವುದಿಲ್ಲ. ಮಧುಸೂಧನ ಎಮ್. ಎನ್ನುವವರು ನನ್ನ ದೊಡ್ಡಮಗ ಇರುತ್ತಾರೆ. ಆ ಕುರಿತಂತೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ನನ್ನ ದೊಡ್ಡ ಮಗ ಮರಣ ಹೊಂದಿದ ನಂತರ ನ್ಯಾಯಾಲಯದಿಂದ ವಾರಸ ಪ್ರಮಾಣ ಪತ್ರವನ್ನು ಪಡೆದಿಲ್ಲ. ಸದರಿ ಪ್ರಮಾಣ ಪತ್ರವನ್ನು ಪಡೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದು ಸೂಚಿಸುವುದು ಸರಿ. ಮಧುಸೂಧನ ಎನ್ನುವವರು ನನ್ನ ಮಗ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಮಧುಸೂಧನ ಮತ್ತು ಎದರುದಾರರ ಮಧ್ಯೆ ವ್ಯವಹಾರ ಆಗಿತ್ತು, ಯಾವ ವಿಷಯದ ಕುರಿತಾಗಿ ವ್ಯವಹಾರವಾಗಿತ್ತು ನನಗೆ ಮಾಹಿತಿ ಇರುವುದಿಲ್ಲ.

ಮೂಲದಾವ ಸಂಖ್ಯೆ 1528/2017 ಇದರ ವಿಚಾರಣೆಗೆ ನಾನೆ ಹಾಜರಾಗುತ್ತಿದ್ದೆನು. ಸದರಿ ದಾವೆಯನ್ನು 1 ಮತ್ತು 2 ನೇ ಎದರುದಾರರ ವಿರುದ್ಧ ಸಲ್ಲಿಸಿದ್ದೆನು. ಮೂಲದಾವ ಸಂಖ್ಯೆ 1528/2017 ಇದರಲ್ಲಿ ನಮ್ಮ ಪರವಾಗಿ ವಾದ ಮಂಡನೆ ಮಾಡುತ್ತಿರುವ ನ್ಯಾಯವಾದಿಗಳು ತಾವು ಪ್ರಕರಣದ ವಿಚಾರಣೆಗೆ ಹಾಜರಾಗುವುದಾಗಿ ತಿಳಿಸಿದ್ದು ನಮ್ಮ ಅವಶ್ಯಕತೆ ಇದ್ದಾಗ ಹೇಳಿ ಕಳುಹಿಸುವುದಾಗಿ ಹೇಳಿದ್ದರಿಂದ ನಾನು ನ್ಯಾಯಾಲಯಕ್ಕೆ ಹಾಜರಾಗದೆ ಇರುವುದರಿಂದ ವಜಾಗೊಂಡಿರುತ್ತದೆ ಆದರೆ ಯಾವ ಕಾರಣಕ್ಕಾಗಿ ವಜಾಗೊಂಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಯಾವುದೇ ವಾಸ್ತವಾಂಶ ಇರಲಿಲ್ಲ ಮತ್ತು ಅದರಲ್ಲಿ ನಾವು ಯಾವುದೇ ಪರಿಹಾರವನ್ನು ಪಡೆಯಲು ಸಾಧ್ಯವಿರಲಿಲ್ಲ ಆದ್ದರಿಂದ ನಾವು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಎದರುದಾರರು ಮತ್ತು ನನ್ನ ಮಗ ಮಧುಸೂಧನ ಇವರ ಮಧ್ಯ ಯಾವುದೇ ವ್ಯವಹಾರ ಆಗಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿದ್ದು ಆದ್ದರಿಂದ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯಲ್ಲಿ ಸಲ್ಲಿಸಿರುವ ವಸ್ತುಸಂಗತಿಗಳು ಸುಳ್ಳಿನಿಂದ ಕೂಡಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

ನಿಪಿ-2 ವೈದ್ಯಕೀಯ ದಾಖಲೆಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಿಪಿ-2 ರಲ್ಲಿ ತಿಳಿಸಿರುವಂತೆ ಯಾವುದೇ ವ್ಯಕ್ತಿ ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಿಪಿ-2 ರಲ್ಲಿರುವ ಅವಧಿಯಲ್ಲಿ ಮೂಲದಾವ ಸಂಖ್ಯೆ 1528/2017 ವಜಾಗೊಂಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಪ್ರಕರಣಕ್ಕು ಮತ್ತು ನನ್ನ ಮಗ ಮಧುಸೂಧನಿಗೆ ಮತ್ತು ಎದರುದಾರರಿಗೆ ಯಾವುದೇ ಸಂಬಂಧ ಇರುವುದಿಲ್ಲ ದಾವ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**ಮರುವಿಚಾರಣೆ :**

**ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

1 ನೇ ಹಿರಿಯ ಸಿವಿಲ್ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ.